Registered Number M. 1299. SATYAVADI (Founded 1917) Every Evening

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 28 ಸಂಚಿಕೆ 301] ಬುಧವಾರ 5—9—45 [3 ಪೈ

— ಆಟಂ ಬಾಂಬಿಗೆ ಪ್ರತಿ ಅಸ್ತ್ರ —

ಪುರಾಣದಲ್ಲಿ ಅಗ್ನ್ಯಸ್ತ್ರಕ್ಕೆ ವಿರುದ್ಧ ವರುಣಾಸ್ತ್ರವನ್ನೂ, ಸರ್ಪಾಸ್ತ್ರಕ್ಕೆ ವಿರುದ್ಧ ಗರುಡಾಸ್ತ್ರವನ್ನೂ ಪ್ರಯೋಗಿಸುವುದನ್ನು ನಾವು ಕೇಳಿದ್ದೇವೆ. ಈಗ ಆಟಂಬಾಂಬು ಪ್ರಯೋಗವು ಪ್ರಪಂಚವನ್ನೇ ಚಿಕಿತಗೊಳಿಸಿದೆ. ಪ್ರಕೃತಿ ನಿರ್ಮಿತವಾದವುಗಳಿಗೆ ವಿರುದ್ಧ ಸಾಧನವನ್ನು ಕಂಡುಹಿಡಿಯಲು ಮಾನವನು ಸಮರ್ಥನಾಗಿರುವಾಗ್ಯೆ, ಮಾನವನಿಂದ ನಿರ್ಮಿತವಾದ ವಸ್ತುಗಳಿಗೆ ವಿರುದ್ಧ ವಸ್ತುಗಳನ್ನ ನಿರ್ಮಿಸಲು ಮಾನವನಿಗೆ ಶಕ್ಯವಾಗದೇ ಇರದು. ಈಗ ಆಟಂ ಬಾಂಬು ವಿರುದ್ಧ ಎದುರು ಅಸ್ತ್ರವನ್ನು ಕಂಡುಹಿಡಿಯಲು ಅಗಲೇ ಪ್ರಯತ್ನ ನಡೆದು ಬ್ರಿಟಿಷರು ಯಶಸ್ವಿಯಾಗಿರುವರು. ಈ ಎದುರು ಅಸ್ತ್ರಕ್ಕೆ 'ಆಟಂ ಷೆಲ್' ಎಂದು ಹೆಸರು. ಆಟಂ ಬಾಂಬು ಈಗ ವೈಮಾನಿಕನಿಂದ ಕಳ್ಪಟ್ಟ ಹಾಕಲ್ಪಡುವುದಷ್ಟೆ. ಇನ್ನು ಮುಂದೆ ಎ1, ಎ2 ಮುಂತಾದ 'ಕೆಟ್' ಮತ್ತು ರಕ್ಕೆ ಬಾಂಬುಗಳಂತೆ ಈ ಆಟಂಬಾಂಬು ಕೂಡ ವೈಮಾನಿಕನಿಂದಲ್ಲದೆ ಪ್ರಯೋಗ ಮಾಡಲ್ಪಡುವುದಾಗದೆ. ಆಟಂ ಬಾಂಬಿನ ಈ ಎಲ್ಲಾ ವಿಧದ ಪ್ರಯೋಗಗಳೂ ಎದುರು ಪ್ರಯೋಗ ಮಾಡಲು ಅನುಕೂಲವಾಗಿ ಈ ಆಟಂ ಷೆಲ್ ರಚಿಸಲ್ಪಟ್ಟಿರುತ್ತದೆ. ಈ ಚಿಕ್ಕ ಯಂತ್ರದಿಂದ ಎಷ್ಟು ದೂರದಿಂದ ಆದರೂ ಬರಲಿ ವಿಮಾನವನ್ನಾಗಲೀ ಸಬ್.ಮೆರಿನ್ನಾಗಲೀ ಕೂಡ ಹಿಡಿಯಬಹುದು. ಈ ಶಾಡರ್ ಸಹಾಯದಿಂದಲೇ ವಿಜ್ಞಾನಿಗಳು ಆಟಂ ಬಾಂಬನ್ನು ಯಾವ ದಿಕ್ಕಿನಲ್ಲಿ ಬಂದರೂ ಅದರ ಸುಳುಹನ್ನು ಕಂಡುಕೊಂಡು, ಆದರೆ ವಿರುದ್ಧ 'ಆಟಂ ಷೆಲ್' ಪ್ರಯೋಗಿಸಲ್ಪಡುವದು. ಆಗ ಈ ಎರಡು ಅಸ್ತ್ರಗಳು ಆಕಾಶದಲ್ಲಿಯೇ ಸಮಾಗಮವಾಗಿ ಸ್ಫೋಟವಾಗಿ ಕೆಳಗೆ ಭೂಮಿಯ ಮೇಲಿದ್ದವರಿಗೂ ಪ್ರಾಣಿಗಳಿಗಗಲಿ ಮತ್ತು ಇತರ ವಸ್ತುಗಳಿಗೂ ಏನೂ ನಿಷ್ಪ್ರಯೋಜನವಾಗಲಾರದು. ಆದುದರಿಂದ ಈ ಆಟಂಬಾಂಬಿಗೆ ಮಾನವನು ಅಷ್ಟು ಭೀತಿಪಡಬೇಕಾಗಿಲ್ಲ. (ನ.ನ.)

.... ಲಂಚವನ್ನು ಅಪಾದನೆಗೆ ಶಿಕ್ಷೆ ....

ಜಬ್ಬಲ್ಪುರ ಸೆ 2— ಜಬ್ಬಲ್ಪುರದ ಟ್ರಾವಲ್ಸ್ ಫೋಟ್ರ್ ಕಂಟ್ರಾಕ್ಟರ್ ಗೋವಿಂದರಾವ್ ನೀಲೆ ಎಂಬಾತನಿಗೆ ಲಂಚದ ಅಪವಾದನೆಯ ಮೇಲೆ 6 ತಿಂಗಳ ಕಠಿಣ ಸಜಾ ಮತ್ತು 100 ರೂ. ದಂಡ, ಧರ್ಮಸಲಾಗಿದೆ. ಅಪಾದಿತನು ಟ್ರಾನ್ಸ್ಪೋರ್ಟ್ ಶಾಖೆಯ ಅಧಿಕಾರಿಯನ್ನು ಸುಳ್ಳು ಲೆಕ್ಕ ಬರೆಯುವಂತೆ ಕೇಳಿಕೊಂಡನು, ಅದಕ್ಕಾಗಿ ಹೆಚ್ಚಿಗೆ ಬಂದ ಲಾಭದಲ್ಲಿ ಅರ್ಧ ಭಾಗವನ್ನು ಅವರಿಗೆ ಲಂಚವಾಗಿ ಕೊಡುವುದಾಗಿ ಹೇಳಿದನಂತೆ. ಸಾರ್ಜಂಟ್ ಸಂಗತಿಯನ್ನು ತಮ್ಮ ಮೇಲಿನ ಅಧಿಕಾರಿಗಳಿಗೆ ತಿಳಿಸಿಬಿಟ್ಟರು. ಅಮೇಲೆ ಗೋವಿಂದರಾವ್ ನೀಲೆ ಸಾರ್ಜಂಟರ ಮನೆಯಲ್ಲಿ ಅವರಿಗೆ ರೂ 150 ಕೊಡುತ್ತಿರುವ ಸಮಯಕ್ಕೆ ಸರಿಯಾಗಿ ಪಕ್ಕದ ಕೋಣೆಯಲ್ಲಿ ಅವಿತುಕೊಂಡಿದ್ದ ಪೋಲೀಸ್ ಅಧಿಕಾರಿಗಳು ಗೋವಿಂದರಾವ್ ನೀಲೆಯವರನ್ನು ಹಿಡಿದು ಬಂಧಿಸಿದರು. ಆ ಮೇಲೆ ವಿಚಾರಣೆಗೆ ಗುರಿಮಾಡಿ ಶಿಕ್ಷೆ ವಿಧಿಸಲಾಯಿತು.

ಭಾರತೀಯ ಗವರ್ನರರ ನೇಮಕ!

ಹಿಂದೂ ಮುಸ್ಲಿಂ ಜಗಳ

ಮೊನ್ನೆ ಆಯಿತ ರಾತ್ರಿ ದೇವ್‌ಬಂದರಿನಲ್ಲಿ ಕೃಷ್ಣಲೀಲಾ ಮೆರವಣಿಗೆಯು ಮಸೀದಿಯೊಂದರ ಬಳಿ ಸಾಗಿದಾಗ ಕೆಲ್ಲುಗಳು ಬೀಳಲ್ಪಟ್ಟವು ಗಲಭೆ ಜಾಸ್ತಿಯಾಗಿ ಪೋಲಿಸರಿಂದ್ಗುಂಡು ಹಾರಿಸಲ್ಪಟ್ಟ ಪ್ರಯುಕ್ತ ಒಬ್ಬನು ಸತ್ತನು.

ಸಿಡಿತದಿಂದ ಮರಣಗಳು

ವಡ್ಯಾಸ್ ಪಲ್ಟಿಸಾಪುರ ಗ್ರಾಮದಲ್ಲಿ ಒಂದು ಷೆಲ್ ಸಿಡಿದಿದ್ದರಿಂದ ಹಿಂಭತ್ತು ಮರಣಗಳಾದವು

ಬೋ ಮರಣದಲ್ಲಿ ಅಪಸಂಬಿಕೆ

ಸಯಾಂ ಸೈನ್ಯದ ಕಮ್ಯಾಂಡರ್ ಇನ್ ಚೀಫ್ ಲೆ| ಜ | ಆಕ್ಲಿ ಸೇನಾ ನಿಶಾಂಗರು ಪತ್ರಿಕೋದ್ಯೋಗಿಗಳಿಗೆ ಸುಭಾಷ್ ಶಾನಿನ ವಿಷಯದಲ್ಲಿ ನಂಬಲು ಕಷ್ಟವಾಗಿದೆಯೆಂದರು.

ನೆಕಾರ್ಥರರ ಅಜ್ಞೆ

ಟೋಕಿಯೋ ಆಕಾಶವಾಣಿಯು ಖಿಲಿ ಎದೇಶಿ ಭಾಷೆಗಳನ್ನು ಉಪಯೋಗಿಸ ಕೂಡದೆಂದು ಜ| ಮೆಕಾರ್ಥರ್ ಆಜ್ಞೆ ಮಾಡಿರುವರು.

ಲಾರ್ಡ್ ವೇವಲ್ಲರು

ಮುಂದಿನ ಮಾರಾಂತ್ಯದಲ್ಲಿ ವೇವಲ್ಲರು ಪಾತಾಳಕ್ಕೆ ಪ್ರಯಾಣವಾಗುವುದು.

(ಹಿಂದಿನ ಪುಟದಿಂದ)

ಳನ್ನು ಈಗ ಭರ್ತಿಮಾಡಬೇಕಾಗಿದೆ ಎಂದರು.

ಕಡೆಯಲ್ಲಿ, ಬ್ರಿಟಿಷ್ ಮತ್ತು ಭಾರತೀಯ ಸೈನ್ಯಾಧಿಕಾರಿಗಳು ಪರಸ್ಪರ ಸ್ನೇಹ ಸೌಹಾರ್ದಗಳಿಂದ ಮನಬೆರೆತು ವರ್ತಿಸತಕ್ಕದ್ದು ಅತ್ಯಗತ್ಯವೆಂದು ನುಡಿದು ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

ಮಿಚ್ಚರ್ ಇಸ್ಮೈಲ್

ಸಂ ಮಿರ್ಜಾ ಇಸ್ಮೈಲ್‌ರವರು ಆರೋಗ್ಯವಾಗಿರುವರೆಂದೂ, ಶುಕ್ರವಾರ ಜಯಪುರಕ್ಕೆ ಪ್ರಯಾಣ ಮಾಡುವರೆಂದೂ ತಿಳಿಯಬರುತ್ತಿದೆ.

ಭಾರತೀಯ ಗೌರ್ನರರು

ಲಂಡನ್ನಿನಲ್ಲಿ ಲಾರ್ಡ್ ವೇವಲ್ ಮುತ್ತು ಪೆಥಿಕ್ ಲಾರೆನ್ಸರಿಗೆ ನಡೆಯುತ್ತಿರುವ ಮಾತುಕತೆಗಳ ಪರಿಣಾಮವಾಗಿ ಭಾರತದ ಪ್ರಾಂತ್ಯಗಳಲ್ಲಿ ಭಾರತೀಯ ಗೌರ್ನರುಗಳನ್ನು ನೇಮಿಸುವುದೆಂದೂ ಸದ್ಯ ಬೊಂಬಾಯಿ ಬಂಗಾಳಗಳಲ್ಲಿ ಹಾಗೆ ಮಾಡಲಾಗುವುದೆಂದು ತಿಳಿಯಬಂದಿದೆ.

ಸಕ್ಕರೆ ಇಲ್ಲ

ಮೈಸೂರಿನ ರೇಷನ್ ಡಿಪೋಗಳನ್ನೇಕದಲ್ಲಿ ಸಕ್ಕರೆ ಸಿಕ್ಕದೆ ಜನರಿಗೆ ತೊಂದರೆಯಾಗಿದೆಯೆಂದು ಹೇಳಲಾಗಿದೆ.

ಹಿಟ್ಲರಿನ ಜರ್ಮನಿಯಿಂದ ದೊರೆತ ಹಣ

1942 ರಲ್ಲಿ 26 ಮಿಲಿಯ ರಿಕ್ ಮಾರ್ಕುಗಳನ್ನು ಕೊಡಲಾಯಿತೆಂದು ಆ ಪರ್ಷದ ಬಡ್ಜೆಟ್ ತೋರಿಸಿದೆ. ಇದು ಅತನ ವಿವಿಧ ಆಧಿಕಾರಿಗಳಿಗಾಗಿ!

ಜಪಾನರ ಆತ್ಮಹತ್ಯೆ

ಜಪಾನು ಮಿತ್ರವಶವಾದುದಕ್ಕಾಗಿ ಅನೇಕ ಮಂದಿ ಜಪಾನೀಯರು ವಿವಿಧ ಕೊಂಡು ಕೆಲವರು ಅಗ್ನಿ ಸಮಾಧಿಯಲ್ಲಿ ಬಿದ್ದು ಪ್ರಾಣತ್ಯಾಗ ಮಾಡಿಕೊಳ್ಳುತ್ತಿರುವದಾಗಿ ವರದಿಯಾಗಿದೆ

ಯಾಂಗಟ್ಸೀ ನದಿಯ ನೆರೆ ಹಾವಳಿಯಿಂದ ಒಂದು ಲಕ್ಷ ಚೀನೀಯರು ನಿರಾಶ್ರಿತರಾಗಿದ್ದಾರೆ.

ದೆಹಲಿಯ ಮೂರು ಥಿಯೇಟರುಗಳಿಗೆ ಮನರಂಜನಾ ತೆರಿಗೆಯನ್ನು ಮನ್ನಾ ಮಾಡಿದ್ದಾಗಿದೆ.

ಈ ವರ್ಷ 3000 ಮಂದಿ ಹಾಜಿ ಯಾತ್ರಿಕರಿಗೆ ಸರ್ಕಾರ ಅನುಜ್ಞೆ ಕೊಟ್ಟಿದೆ.

ಬ್ರಿಟಿಷ್ ಮಿಲಿಟರಿ ಸರ್ಕಾರದ ಅಧೀನದಲ್ಲಿ ಜರ್ಮನಿಯ ಅಧ್ಯಕ್ಷನ ನೇಮಕ

ಉತ್ತರ ರೈನ್‌ಗೆ ನೇಮಿಸಿದಾಗ

ಸುಖ ಆರೋಗ್ಯ ಆನಂದದಾಯಕ ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವ್ಯಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯುಳ್ಳುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ವ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಳ್ಳಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುಡುತಿಸ ಕೇಸರಿ ಅತ್ಯಂತ ಪರಿಶುದ್ಧವಾದ ಔತರಿಯಾದುದು. ಎಮರಂಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ ರಸ್ತೆ, ಜಿ. ಟಿ. ಮದರಾಸು.

At Ranjit

BEPI

ರಣಜಿತ್ ಟಾಕೀಸಿನಲ್ಲಿ

ಕುರ್ಸಿದ್, ಆಶುಷ್, ವಾಸಂತಿ, ಕೇಸರಿ

ಪಾತ್ರವಹಿಸಿರುವ

ಬೇಟೆ

From 7-9-45

Humayun

AT Opera—

ಕೋಪಿಷ್ಠ

Erom 6-9-45

GEET

(Hindi)

With Sahu Modak & Nirmala

Daily 3 Shows

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ಅಕ

ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

ಸತ್ಯವಾದಿ

ದಿನಪತ್ರಿಕೆ

ಸ್ಥಳದಲ್ಲಿ — ತಿಂಗಳಿಗೆ 6 ಆಣೆ

ಕೂಡಲೇ ಚಂದಾದಾರರಾಗಿ

ಮ್ಯಾನೇಜರ್, ಸತ್ಯವಾದಿ

ಚಾಮರಾಜಪುರಂ ಮೈಸೂರು

ಭಾರತದ ಮುಖ್ಯ ಸೇನಾನಾಯಕ ಭಾಷಣ

ಬೆಂಗಳೂರು, ಸೆ ೧ — ಸ್ಥಳೀಯ ವಾಕ್ಚಿತ್ರ ಮಂದಿರವೊಂದರಲ್ಲಿ ಭಾರತದ ಮುಖ್ಯ ದಂಡನಾಯಕರಾದ ಜ| ಸರ್ ಕ್ಲಾಡ್ ಆಕ್ಲಿನ್‌ಲೆಕ್ಕರ್ಲು ಸಮಾರು ೩೦೦ ಬ್ರಿಟಿಷ್ ಮತ್ತು ಭಾರತೀಯ ಅಧಿಕಾರಿಗಳನ್ನು ಕುರಿತು ಭಾಷಣ ಮಾಡುತ್ತಾ ಯುದ್ಧ ಮುಕ್ತಾಯವಾದರೂ ಭಾರತದ ಸೈನಿಕರ ಕರ್ತವ್ಯ ಮಾತ್ರ ಮುಗಿದಿಲ್ಲ ವೆಂದು ಒತ್ತಿ ಹೇಳಿದರು. ಜಿಗ್ಸೋಯ ಎಷ್ಟ್ಯ ಮತ್ತು ಜಪಾನ್ ದೇಶಗಳ ಬಿಡುಗಡೆ ಹೊಂದಿದ ನಾಡುಗಳಲ್ಲಿ ಹೋಗಿ ನೆಲಸುವುದಕ್ಕೆ ಭಾರತೀಯ ಸೇನಾಶಾಖೆ ಬೇಕಾದಷ್ಟು ಜನರನ್ನು ಒದಗಿಸಬೇಕಾಗಿದೆ. ಮೂರು ರೀವುಗಳನ್ನು ನಿರ್ವಹಿಸುವುದೂ ಸೈನ್ಯ ಶಾಖೆಯು ಹೆಚ್ಚಿನ ಕೆಲಸ. ಇನ್ನು ಮೇಲೆ ಶಿಕ್ಷಣ ಕ್ರಮವನ್ನು ಹತೋಟಿ ಮಾಡಿ ಹೆಚ್ಚು ವಿವೇಕದಿಂದ ಅದನ್ನು ರೂಪುಗೊಳಿಸುವುದು ಅಗತ್ಯವೆಂದರು.

ಸಿ-ಇ-ಸಿ ರವರು ಬ್ರಿಟಿಷ್ ಪ್ರಜಾ ಪ್ರಭುತ್ವದಲ್ಲಿ ಭಾರತಕ್ಕೂ ಒಂದು ಸ್ಥಾನವಿದೆ. ಇನ್ನು ಮೇಲೆ ಆರ್ಥಿಕ ಮುಗ್ಗಟ್ಟು ತೀವ್ರವಾಗಿ ತಲೆಯುತ್ತುತ್ತವೆ. ವ್ಯಾಪಾರ ಪರಿಸ್ಥಿತಿ ಸ್ಥಿಮಿತಕ್ಕೆ ಬರುವ ವರೆಗೆ ಹಣದ ಓಡಾಟ ಕಾಗ್ಗುತ್ತವೆ. ಇದರ ಕಾವು ನಮಗೆಲ್ಲ ತಟ್ಟುತ್ತಿದೆ. ಆದಕಾರಣ ಮೊದಲಿಗಿಂತ ಹೆಚ್ಚು ಹಿತವಾಗಿ, ವಿವೇಕವಾಗಿ ಹಣ ಉಳಿಸತಕ್ಕದ್ದು ಈಗಲೇ ಎಂದು ಎಚ್ಚರಿಸಿದರು.

ಕೊನೆಯದಾಗಿ ದಕ್ಷಿಣ ಸೇನಾಶಾಖೆಯ ಅಧಿಕಾರಿಗಳನ್ನು ಅವರ ತೃಪ್ತಿಕರವಾದ ಕಾರ್ಯ ನಿರ್ವಹಣೆಕ್ಕಾಗಿ ಮೆಚ್ಚಿದರು. ಆಮೇಲೆ ದಕ್ಷಿಣ ಸೇನಾಧಿಕಾರಿ ಲೆಫ್ಟಿನೆಂಟ್ ಜನರಲ್ ಸರ್ ಫ್ರಾನ್ಸಿಸ್ ಟ್ಯೂಕರ್ ರವರು ಮುಖ್ಯ ಸೇನಾನಿಗಳು ಸೈನ್ಯಾಧಿಕಾರಿ ಶಿಕ್ಷಣ ಶಾಲೆಗೆ ತೆರಳಿದರು. ಬ್ರಿಗೇಡಿಯರ್ ಎಲ್. ಬಿ. ಜೋಕ್ಸರು ಅವರನ್ನು ಸ್ವಾಗತಿಸಿದರು. ಸೇನಾನಿಗಳು ಶಿಕ್ಷಣ ಶಾಲೆಯಲ್ಲಿ ಕೇಡೆಟ್ ದಳವನ್ನು ಪರಿಶೀಲಿಸಿ ವಂದನೆಯನ್ನು ಸ್ವೀಕರಿಸಿದರು.

ಶಾಲೆಯ ಉಪನ್ಯಾಸ ಮಂದಿರದಲ್ಲಿ ಕೇಡೆಟ್ ಅಧಿಕಾರಿಗಳನ್ನು ಕುರಿತು ಮುಖ್ಯ ಸೇನಾನಾಯಕರು, " ಕಳೆದ ಸಾರಿ ನಾನು ನೋಡಿದ್ದಕ್ಕಿಂತ ಈಗ ನಿಮ್ಮ ಮಟ್ಟ ಮೇಲಾಗಿದೆ. ಬಿಡುಗಡೆಯಾದ ನಾಡುಗಳಿಗೆ ನಾವು ಅಧಿಕಾರಿಗಳನ್ನು ಸೇವಿಸಬೇಕಾಗಿದೆ ಹಲವು ಸೈನ್ಯಾಧಿಕಾರಿಗಳು ಇಂಡೋನೇಷಿಗೆ ನಿಯೋಜಿತರಾಗಿ ಹಿಂದಿರುಗುತ್ತಿದ್ದಾರೆ. ಇವರ ಸ್ಥಾನಗಳ